ಸಾಕ್ಷಿಯನ್ನು ದಿನಾಂಕ **23-09-2023** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು- ಆರೋಪಿ ಪರ ಶ್ರೀ ಪಿ ಕೆ ಎಸ್ ವಕೀಲರಿಂದ:</u>

ನಾನು ಪಂಚರಾಗಿ ಹೋಗಲು ಅನುಮತಿಸಿದಾಗ ಯಾವ ಪ್ರಕರಣ ಎಂದು ನಮಗೆ ಹೇಳಿರುವುದಿಲ್ಲ. ನಾವು ದಾಳಿ ಮಾಡುವವರಿಗೂ ಸಹಾ ಯಾರ ಮನೆ ಎಂದು ತಿಳಿಸಿರಲಿಲ್ಲ ಎಂದರೆ ಬೆಳಗೆ ಹೋದಾಗ ತಿಳಿಸಿದರು. ವಸ್ತುಗಳನ್ನು ಮೌಲ್ಯಮಾಪನವನ್ನು ಪೊಲೀಸರು ಮಾಡಿದರು ಎಂದರೆ ಸರಿ. ಚಿನ್ನಾಭರಣಗಳು ಧಾನವಾಗಿ ಬಂದಿತ್ತೋ ಅಥವಾ ಖರೀದಿಮಾಡಿದ್ದು ನನ್ನ ಸಮಕ್ಷಮ ಮಾಡಿಲ್ಲ. ಸದರಿ ಮನೆಯಲ್ಲಿ ಕಮಲ ಮತ್ತು

ಅವರ ತಾಯಿ ವಾಸವಿದ್ದರು. ಸದರಿ ಮನೆಯಲ್ಲಿ ಆರೋಪಿಗೆ ಸಂಬಂಧಪಟ್ಟಂತೆ ಯಾವುದೇ ವಸ್ತುಗಳು ಇರಲಿಲ್ಲ ಎಂದರೆ ಸರಿ . ಲಾಕರ್ ತೆಗೆದಾಗಲೂ ಸಹಾ ಕಮಲರವರ ವಸ್ತುಗಳನ್ನು ಬಿಟ್ಟರೆ ಆರೊಪಿಗೆ ಸಂಬಂಧಿಸಿದ ಯಾವುದೇ ವಸ್ತುಗಳು ಇರಲಿಲ್ಲ ಎಂದರೆ ಸರಿ ಮೌಲ್ಯಮಾಪನದ ಬಗ್ಗೆ ನನಗೇನೂ ಮಾಹಿತಿ ಇಲ್ಲ ಅದರೂ ಪೊಲೀಸರ ಕೋರಿಕೆಯ ಮೇರೆಗೆ ಮಹಜರಿಗೆ ಸಹಿ ಮಾಡಿದ್ದೇನೆ ಸರಿಯಲ್ಲ. ನಾನು ಸರ್ಕಾರಿ ನೌಕರಳಾಗಿದ್ದು ಲೋಕಯುಕ್ತ ಪೋಲೀಸರಿಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಡಿಕೇರಿ- ಕೊಡಗು.